ವಿದ್ಯಾ–ಬೋಧನೆಗೆ ಅಡಚಣೆಯಾಗಿದೆ. ಆದ್ದರಿಂದ ಈ ವಿಷಯವು ಅತ್ಯಂತ ಮಹತ್ವದ ಮತ್ತು ಜರೂರಾದ ವಿಷಯವಾಗಿರುವುದರಿಂದ ಮಾನ್ಯ ಶಿಕ್ಷಣ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಕೆ.ಎಚ್. ರಂಗನಾಥ್.—ಮಾನ್ಯ ಅಧ್ಯಕ್ಷರೇ ನಿಯಮ ೫೫ಳಿಕ್ಕೆ ಈ ಸ್ಟೇಟ್‌ಮೆಂಟ್ ಓದುವುದು ಅಷ್ಟು ಸರಿಯಲ್ಲ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ ವಿಷಯವನ್ನು ನನ್ನ ಗಮನಕ್ಕೆ ತೆಗೆದುಕೊಂಡಿದ್ದೇನೆ. ಸರ್ಕಾರದ ವತಿಯಿಂದ ಏನು ಮಾಡಿದ್ದೇವೆ ಎನ್ನುವುದನ್ನು ಮಾನ್ಯ ಸದಸ್ಯರಿಗೆ ಪತ್ರದ ಮುಖಾಂತರ ತಿಳಿಸುತ್ತೇನೆ.

೩. ಮಂಗಳೂರು–ಪುತ್ತೂರು–ಕುರ್ಚಿಪಳ್ಳಿ ಮಾರ್ಗದಲ್ಲಿ ಅಂತರ ರಾಜ್ಯ ಬಸ್ ಸೌಕರ್ಯಕ್ಕೆ ಮನವಿ

ಶ್ರೀ ಎ. ರುಕ್ಮಯ್ಯ ಪೂಜಾರಿ.–ಮಾನ್ಯ ಅಧ್ಯಕ್ಷರೇ ಮಂಗಳೂರು–ಪುತ್ತಾರು ಕುರ್ಚಿಪಳ್ಳಿ ಮಾರ್ಗವಾಗಿ ಅಂತರರಾಜ್ಯ ಪರವಾನಿಗೆ ಹೊಂದಿದೆ ಎರಡು ಸರಕಾರಿ ಬಸ್ಸುಗಳು ಓಡಾಡುತ್ತಿದ್ದು ಸಧ್ಯ ಈ ಎರಡು ಬಸ್ಸುಗಳೂ ತೀರಾ ಬಡಕಲಾಗಿದ್ದು ಸಂಚಾರಕ್ಕೆ ಅಯೋಗ್ಯವಾಗಿವೆ. ನಿತ್ಯ ಸಂಚರಿಸುತ್ತಿರುವ ಈ ಬಸ್ಸುಗಳು ದಿನಾ ಒಂದಲ್ಲ ಒಂದು ರೀತಿಯಲ್ಲಿ ಕೆಡುತ್ತಿದ್ದು ವಾರದಲ್ಲಿ ಕೆಲವು ದಿನ ಬಸ್ಸುಗಳೂ ಬರುತ್ತಾ ಇಲ್ಲ. ತೀರಾ ಹಳೆಯದಾದ ಶಬ್ದಗಳಿಂದ ಕೂಡಿದ್ದು ಈ ಬಸ್ಸುಗಳು ತಡೆರಹಿತವಾಗಿದ್ದು ವೇಗವಾಗಿ ಸಮಯಕ್ಕೆ ಸರಿಯಾಗಿ ಗುರಿ ಮುಟ್ಟುವುದಕ್ಕೆ ಅಸಾಧ್ಯವಾಗುತ್ತದೆ. ಈ ರೂಟಿನಲ್ಲಿ ಬಸ್ಸುಗಳಿಗೆ ಧಾರಾಳ ಜನ ಸಿಗುತ್ತಿದ್ದು ಉತ್ತಮ ಆದಾಯ ಸಂಸ್ಥೆಗೆ ಬರುತ್ತಿದ್ದರೂ ಹೊಸ ಬಸ್ಸುಗಳನ್ನು ಹಾಕದೆ ಇರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುವುದು ಮಾತ್ರವಲ್ಲ ಸಂಸ್ಥೆಗೆ ಆದಾಯ ಕಡಿಮೆಯಾಗುವುದು ಮತ್ತು ನಿತ್ಯ ಈ ಬಸ್ಸುಗಳಲ್ಲಿ ನಿಂತೆ ಇರುವಷ್ಟು ಜನ ನಿಬಡತೆ ಇದ್ದು ಇನ್ನೊಂದು ಅಂತರರಾಜ್ಯ ಬಸ್ ಸರ್ವಿಸ್ಸ್ ಒದಗಿಸಬೇಕಾಗಿ ನಾನು ಮಾನ್ಯ ಸಾರಿಗೆ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಆತ್ಮಾನಂದ (ರೇಷ್ಮೆ ಖಾತೆ ರಾಜ್ಯ ಸಚಿವರು).—ಮಾನ್ಯಸಾರಿಗೆ ಸಚಿವರ ಪರವಾಗಿ ಈ ಕೆಳಕಂಡ ಹೇಳಿಕೆ ಮಾಡುತ್ತೇನೆ.

ಕರ್ನಾಟಕ ಮತ್ತು ಕೇರಳ ಸರ್ಕಾರಗಳ ನಡುವೆ ೧೯೭೬ರ ಅಂತರ ರಾಜ್ಯ ಒಪ್ಪಂದವು ಗರಿಷ್ಠ ೩ ಟ್ರಿಪ್ಪುಗಳನ್ನು ಪುತ್ತೂರಿನಿಂದ ಕುರ್ಚಿಪಳ್ಳಿಗೆ ಸುಜಿತಹಳ್ಳಿ ಮಾರ್ಗವಾಗಿ ಓಡಿಸುವಂತೆ ಒಪ್ಪಿಗೆಯಾಗಿದೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಮೇಲೆ ಸೂಚಿಸಿದ ಟ್ರಿಪ್ಪುಗಳನ್ನು ಈ ಕೆಳಕಂಡ ಸಮಯದಲ್ಲಿ ಸೂಚಿಸಿದಂತೆ ಓಡಿಸುತ್ತಿದೆ.

(ಅ) ಸೇರುವುದು ೧೭೮೦ ೧೩೨೦ ೦೮೪೫ ಪುತ್ತೂರು ೦೭೩೦ ೦೮೩೦ ೧೪೦೦ ಬಿಡುವುದು

(ಆ) ಬಿಡುವುದು ೧೬೮೦ ೧೧೫೦ ೦೭೧೫ ಕುರ್ಚಿಪಳ್ಳಿ ೦೯೦೦ ೧೧೦೦ ೧೫೫೦ ಸೇರುವುದು

ಇದಲ್ಲದೆ ಮಂಗಳೂರಿನಿಂದ ಕುರ್ಚಿಪಳ್ಳಿಗೆ ಪುತ್ತೂರು ಮಾರ್ಗವಾಗಿ ಒಂದು ಟ್ರಿಪ್‌ನ್ನು ಈ ಕೆಳಕಂಡ ಸಮಯದಲ್ಲಿ ಓಡಿಸಲಾಗುತ್ತಿದೆ.

ಸೇರುವುದು ೧೨೦೦ ಮಂಗಳೂರು ೧೬೦೦ ಬಿಡುವುದು
೧೦೪೫ ಪುತ್ತೂರು ೧೪೦೦

ಬಿಡುವುದು ೦೯೩೦ ಕುರ್ಚಿಪಳ್ಳಿ ೦೯೦೦ ಸೇರುವುದು

ಈ ಮೇಲ್ಕಂಡ ಟ್ರಿಪ್ಪುಗಳಲ್ಲಿ ಎಂ.ಇ.ಎಫ್. ೫೪೨೬ ಮತ್ತು ೫೪೨೭ ನೋಂದಣಿ ಸಂಖ್ಯೆಯುಳ್ಳ ವಾಹನಗಳನ್ನು ಓಡಿಸಲಾಗುತ್ತಿದೆ. ಈ ಮೇಲಿನ ವಾಹನಗಳನ್ನು ೧೯೭೬ರಲ್ಲಿ ನೋಂದಾಯಿಸಲಾಗಿದೆ. ಆದರೆ ಈ ವಾಹನಗಳ ಬದಲಿಗೆ ಎಂ.ವೈ.ಎಫ್. ೯೨೦೭ ಮತ್ತು ೯೨೦೮ ನೋಂದಣಿ ಸಂಖ್ಯೆಯುಳ್ಳ ವಾಹನಗಳನ್ನು ರಾಜ್ಯ ಸಾರಿಗೆ ಪ್ರಾಧಿಕಾರ ಬೆಂಗಳೂರು ಇವರ ಅನುಮೋದನೆಯ ನಂತರ ಬದಲಾಯಿಸಲಾಗುವುದು.

ಹೆಚ್ಚುವರಿ ಸಂಚಾರ ಅವಶ್ಯಕತೆಗಳನ್ನು ಪರಿಗಣಿಸಿ, ಮಂಗಳೂರಿನಿಂದ ಕುರ್ಚಿಪಳ್ಳಿಗೆ ಪುತ್ತೂರು ಮತ್ತು ಸುಜಿತಹಳ್ಳಿ ಮಾರ್ಗವಾಗಿ ಹೆಚ್ಚುವರಿ ವಾಹನಗಳನ್ನು ಮಂಜೂರಾಲದ ನಂತರ ಓಡಿಸಲು ಕ್ರಮ ತೆಗೆದುಕೊಳ್ಳಲಾಗುವುದು.